ಪಾವತಿಸಿ ಈ ಬಸ್ ನಿಲ್ದಾಣವನ್ನು ಉಪಯೋಗಿಸಲಾಗುತ್ತಿದೆ. ಸಂಸ್ಥೆ ಬಸ್ ನಿಲ್ದಾಣ ನಿರ್ಮಿಸಲು ಇದೇ ಸ್ಥಳ ಸೂಕ್ತವೆಂದು ಗುರುತಿಸಿದೆ. ಇದನ್ನು ಉಚಿತವಾಗಿ ಸಂಸ್ಥೆಗೆ ವಹಿಸಲು ಪುರಸಭೆಯನ್ನು ಕೋರಲಾಗಿದೆ. ಪುರಸಭೆಯವರು ಈ ನಿಲ್ದಾಣವನ್ನು ಸಂಸ್ಥೆಗೆ ವಹಿಸಿಕೊಟ್ಟ ನಂತರ ಅವಶ್ಯಕತೆಯನು ಸಾರವಾಗಿ ಸುಸಜ್ಜಿತ ಬಸ್ ನಿಲ್ದಾಣವನ್ನು ನಿರ್ಮಿಸಲಾಗುವುದು.

ರಾಜೀವ್ ಗಾಂಧಿ ವಸತಿ ನಿಗಮದ ವತಿಯಿಂದ ಭಾಲ್ಕಿಯಲ್ಲಿ ಮನೆಗಳ ನಿರ್ಮಾಣ

521 - ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜೀವ್‌ಗಾಂಧಿ ವಸತಿ ನಿಗಮದ ವತಿಯಿಂದ ಪ್ರಸಕ್ತ ಸಾಲಿನಲ್ಲಿ ರಾಜ್ಯಾದ್ಯಂತ ನಿರ್ಮಿಸಲು ಉದ್ದೇಶಿಸಿರುವ ಮನೆಗಳ ಸಂಖ್ಯೆ ಎಷ್ಟು?*

ಆ) *ಇದಕ್ಕಾಗಿ ಎಷ್ಟು ಹಣವನ್ನು ವೆಚ್ಚ ಮಾಡಲಾಗುವುದು? ಎಷ್ಟು ಹಣವನ್ನು ಪ್ರಸ್ತುತ ಬಜೆಟ್‌ನಲ್ಲಿ ಈ ಕಾರ್ಯಕ್ರಮಕ್ಕಾಗಿ ನಿಗಧಿಪಡಿಸಲಾಗುವುದು?*

ಇ) *ಈ ಯೋಜನೆಯ ಪೈಕಿ ಬೀದರ್ ಜಿಲ್ಲೆಯ ಭಾಲ್ಕಿಯಲ್ಲಿ ಎಷ್ಟು ಮನೆಗಳನ್ನು ನಿರ್ಮಿಸಲು ಸರ್ಕಾರವು ಉದ್ದೇಶಿಸಿದೆ?*

ಈ) *ಇದಕ್ಕಾಗಿ ವೆಚ್ಚ ಮಾಡಲಾಗುವ ಹಣವೆಷ್ಟು? ಇದಕ್ಕಾಗಿ ಬಾಲ್ಕಿಯಲ್ಲಿ ಸ್ಥಳವನ್ನು ಗುರುತಿಸಲಾಗಿದೆಯೇ? ಗುರುತಿಸಿದಲ್ಲಿ ಅದರ ವಿವರ ಒದಗಿಸುವುದು?*

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು) :

ಅ) ಪ್ರಸಕ್ತ ಸಾಲಿನಲ್ಲಿ ಅಂದರೆ 1999-2000 ನೇ ಸಾಲಿನಲ್ಲಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದಿಂದ ಮನೆಗಳ ನಿರ್ಮಾಣ ತೆಗೆದುಕೊಂಡಿರುವುದಿಲ್ಲ. 2000-2001ನೇ ಸಾಲಿನಲ್ಲಿ 2.00 ಲಕ್ಷ ಮನೆಗಳನ್ನು ಕಟ್ಟಲು ಉದ್ದೇಶಿಸಲಾಗಿದೆ,.

ಆ) ಮೇಲಿನ ಪ್ರಶ್ನೆ(ಅ)ಗೆ ನೀಡಿದ ಉತ್ತರದಿಂದಾಗಿ ಉದ್ಭವಿಸುವುದಿಲ್ಲ.

ಇ) ಮೇಲಿನ ಪ್ರಶ್ನೆ(ಅ)ಗೆ ನೀಡಿದ ಉತ್ತರದಿಂದಾಗಿ ಉದ್ಭವಿಸುವುದಿಲ್ಲ.

ಈ) ಮೇಲಿನ ಪ್ರಶ್ನೆ(ಎ)ಗೆ ನೀಡಿದ ಉತ್ತರದಿಂದಾಗಿ ಉದ್ಭವಿಸುವುದಿಲ್ಲ.

ಕಮಲಾಪುರ ಕ್ಷೇತ್ರದಲ್ಲಿ ಹುಡ್ಕೋ ನೆರವಿನಿಂದ ಮನೆ

525 - ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪುರ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕಮಲಾಪುರ ಕ್ಷೇತ್ರದಲ್ಲಿ ಈವರೆಗೆ ಹುಡ್ಕೋ ಯೋಜನೆಯಡಿ ಫಲಾನುಭವಿಗಳಿಗೆ ನೀಡಲಾದ ಮನೆಗಳ ಸಂಖ್ಯೆ ಎಷ್ಟು?*

ಅ) ಅಂಬಡಗಾ ಗ್ರಾಮದಲ್ಲಿ ಈ ರೀತಿ ನೀಡಲಾಗಿರುವ ಮನೆಗಳಲ್ಲಿ ವಾರಸುದಾರರ ಮೇಲೆ ಗೂಂಡಾಗಿರಿ ಮಾಡಿ ಬೇರೆಯವರು ಮನೆಗಳನ್ನು ಆಕ್ರಮಿಸಿಕೊಂಡು ವಾಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಳ್ಳುವ ಕ್ರಮಗಳೇನು?

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು) :

ಅ) 1467 ಮನೆಗಳು

ಆ) ಹೌದು

ಇ) ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುವುದು.

ಮೆಟ್ರೋಪಾಲಿಟನ್ ಹೌಸಿಂಗ್ ಸೊಸೈಟಿ

526 - ಶ್ರೀ ರಾಮದಾಸ್. ಎ (ಕೃಷ್ಣರಾಜ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೆಟ್ರೋ ಪಾಲಿಟನ್ ಹೌಸಿಂಗ್ ಸೊಸೈಟಿಯ ಪದಾಧಿಕಾರಿಗಳು ಮತ್ತು ನಿರ್ದೇಶಕರುಗಳ ಹೆಸರುಗಳನ್ನು ಒದಗಿಸುವುದು?

ಆ) ಇಲ್ಲಿನ ಒಟ್ಟು ಸದಸ್ಯರ ಸಂಖ್ಯೆ ಎಷ್ಟು? ಈ ಸೊಸೈಟಿಯಲ್ಲಿ ಸದಸ್ಯರಾಗಲು ಅರ್ಹತೆ ಏನು?

ಇ) ಈ ಸೊಸೈಟಿಗೆ ಎಲ್ಲೆಲ್ಲಿ ಎಷ್ಟೆಷ್ಟು ಜಮೀನು ನೀಡಲಾಗಿದೆ?

ಈ) ಈ ಸೊಸೈಟಿಯ ಕಾಮಗಾರಿಗಳನ್ನು ಸರ್ಕಾರಿ ಇಲಾಖೆ ಮತ್ತು ಅರೆ ಸರ್ಕಾರಿ ನಿಗಮಗಳನ್ನು ನಿರ್ವಹಿಸುತ್ತಿವೆಯೇ?

ಉ) ನಿವೇಶನ ಪಡೆದಿರುವ ಸದಸ್ಯರುಗಳು ಯಾರು ಯಾರು? ಇವರುಗಳಿಗೆ ಯಾವ ಅಳತೆ ನಿವೇಶನ ನೀಡಲಾಗಿದೆ?

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವ) :

ಅ) ಮೇಟ್ರೋಪಾಲಿಟನ್ ಹೌಸಿಂಗ್ ಸೊಸೈಟಿಯ ಪದಾಧಿಕಾರಿಗಳು ಮತ್ತು ನಿರ್ದೇಶಕರುಗಳ ಹೆಸರುಗಳು ಈ ಕೆಳಕಂಡಂತೆ ಇದೆ.

1)	ಶ್ರೀಮತಿ ಅಚಲಾಮೌಲಿಕ್	:	ಅಧ್ಯಕ್ಷರು
2)	ಶ್ರೀ ಎಸ್.ಎಂ. ಚಲವಾದಿ	:	ಉಪಾಧ್ಯಕ್ಷರು
3)	ಶ್ರೀ ಕೆ.ಪಿ. ಕೃಷ್ಣನ್	:	ನಿರ್ದೇಶಕರು
4)	ಶ್ರೀ ಹೆಚ್.ಪಿ. ಕೃಷ್ಣಪ್ಪ	:	ನಿರ್ದೇಶಕರು